ತರೀಕೆರೆ ಪುರಸಭೆಯಂವರು ನಗರಾಭಿವೃದ್ಧಿಗಾಗಿ ೧೦ ಎಕರೆ ಭೂಮಿಯನ್ನು ಕೇಳಿರುವ ಬಗ್ಗೆ

*೫೫೯. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತರೀಕೆರೆ ಪುರಸಭೆಯವರು ಅರಣ್ಯ ಇಲಾಖೆಯಿಂದ ನಗರಾಭಿವೃದ್ಧಿಗಾಗಿ ಅರಣ್ಯ ಡಿಪೋನಲ್ಲಿ ೧೦ ಎಕರೆ ಜಮೀನನ್ನು ಕೇಳಿರುವುದು ನಿಜವೇ ?

ಆ) ಹಾಗಿದ್ದಲ್ಲಿ ನಗರಾಭಿವೃದ್ಧಿಗಾಗಿ ೧೦ ಎಕರೆ ಜಮೀನನ್ನು ಕೊಡಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ಈ ಜಾಗವು ಡಿಪೋ ನಡೆಸುವುದಕ್ಕೆ ಬೇಕಾಗಿರುವುದರಿಂದ ಅವರ ಕೋರಿಕೆಯನ್ನು ಪರಿಶೀಲಿಸಿ ತಿರಸ್ಕರಿಸಲಾಗಿದೆ.

ಕೊಡಗಿನಲ್ಲಿ ರೇಷ್ಮೆ ಇಲಾಖೆಯ ಚಟುವಟಿಕೆ ಬಗ್ಗೆ

*೫೬೩. ಶ್ರೀಮತಿ ಸಂಪಾ ವಸಂತ್ (ವಿರಾಜಪೇಟೆ).—ಮಾನ್ಯ ರೇಷ್ಮೆ ಮಂತ್ರಿಗಳು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಡಗಿನಲ್ಲಿ ರೇಷ್ಮೆ ಇಲಾಖೆ ಎಷ್ಟು ವರ್ಷದಿಂದ ಕಾರ್ಯ ಆರಂಭಿಸಿದೆ ?

ಆ) ಈ ಇಲಾಖೆಯವರ ತಾಲ್ಲೂಕುವಾರು ಚಟುವಟಿಕೆಗಳೇನು ?

ಇ) ಈವರೆಗೆ ಸರ್ಕಾರದವರು ಕೊಡಗು ಜಿಲ್ಲೆಗೆ ಖರ್ಚು ಮಾಡಿರುವ ಹಣವೆಷ್ಟು ?

ಈ) ಆ ಪ್ರದೇಶಕ್ಕೆ ಗಿರಿಜನರಿಗೆ ಸರ್ಕಾರದವರು ಒದಗಿಸಿರುವ ಸೌಲಭ್ಯಗಳೇನು ಮತ್ತು ಇದಕ್ಕಾಗಿ ಖರ್ಚು ಮಾಡಿದ ಹಣವೆಷ್ಟು ?

ಶ್ರೀ ಕೆ. ಎಂ. ಮುನಿಯಪ್ಪ. (ರೇಷ್ಮೆ ಸಚಿವರು),—

ಅ) ೧೯೫೨.

ಆ) ಚಟುವಟಿಕೆಗಳನ್ನು ಕೆಳಗೆ ನಮೂದಿಸಲಾಗಿದೆ : —

ಸೋಮವಾರ ಪೇಟೆ ತಾಲ್ಲೂಕು :

೧ ಬಿತ್ತನೆ ಕಡ್ಡಿಗಳನ್ನು ಮತ್ತು ಬಿತ್ತನೆ ಗೂಡುಗಳನ್ನು ಒದಗಿಸುವ ಸಲುವಾಗಿ ರೇಷ್ಮೆ ಕೃಷಿ ಕ್ಷೇತ್ರದ ನಿರ್ವಹಣೆ.

೨ ವಿಸ್ತರಣಾ ಕೇಂದ್ರ, ರೇಷ್ಮೆ ಉದ್ಯಮದ ವಿಸ್ತರಣೆಗೆ ಕ್ರಮಕೈಗೊಳ್ಳುವ ಸಲುವಾಗಿ.

೩ ಚಾಕಿಸಾಕಾಣಿಕೆ ಕೇಂದ್ರಗಳ ನಿರ್ವಹಣೆ, ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಹುಳುಗಳನ್ನು ಎರಡನೇ ಹಂತದವರೆಗೆ ತಾಂತ್ರಿಕವಾಗಿ ಸಾಕಣೆ ಮಾಡಿ ಒದಗಿಸುವುದು.

೪ ಗಿರಿಜನ ಉಪಯೋಜನೆಯಲ್ಲಿ ಗಿರಿಜನ ರೇಷ್ಮೆ ಬೆಳೆಗಾರರಿಗೆ ಕಾಲೋನಿಗಳ ಸ್ಥಾಪನೆ, ಚಾಕಿ ಸಾಕಾಣಿಕೆಗೆ ಕಟ್ಟಡಗಳ ನಿರ್ಮಾಣ, ಕೊಳವೆ ಬಾವಿ, ತೋಡಿ ನೀರಾವರಿ ಸೌಲಭ್ಯ, ಹುಳು ಸಾಕುವ ಉಪಕರಣಗಳನ್ನು ಮುಫತ್ತಾಗಿ ಕೊಡುವುದು. ಇವೇ ಮುಂತಾದ ಸೌಲಭ್ಯಗಳನ್ನು ಒದಗಿಸುವುದು.

೫ ರೇಷ್ಮೆ ಉದ್ಯಮದಲ್ಲಿ ತರಬೇತಿ ನೀಡುವುದು.

೬ ವಿಶೇಷ ಘಟಕ ಯೋಜನೆ ಮತ್ತು ಕಾಡಾ ಯೋಜನೆಗಳಲ್ಲಿ ಹುಳು ಸಾಕುವ ಸಲಕರಣೆಗಳನ್ನು ಒದಗಿಸುವ ಸೌಲಭ್ಯ

೭ ಹೊಸದಾಗಿ ಹಿಪ್ಪನೇರಳೆ ಬೆಳೆಸಲು ಪ್ರೋತ್ಸಾಹ ನೀಡುವ ಸಲುವಾಗಿ ಹಿಪ್ಪನೇರಳೆ ಬಿತ್ತನೆ ಕಡ್ಡಿಗಳನ್ನು ಮತ್ತು ಬೇಕಾದ ಗೊಬ್ಬರವನ್ನು ಒದಗಿಸುವುದು.

೮ ಸಂಮಾರು ೩೫೮ ಎಕರೆ ವಿಸ್ತೀರ್ಣದಲ್ಲಿ ೪೧೩ ರೇಷ್ಮೆ ಬೆಳೆಗಾರರು ರೇಷ್ಮೆ ವ್ಯವಸಾಯ ಕೈಗೊಂಡಿದ್ದು ಅವರಿಗೆ ಅಗತ್ಯವಾದ ತಾಂತ್ರಿಕ ಸೌಲಭ್ಯವನ್ನು ಒದಗಿಸುವುದು.

ವೀರಾಜಪೇಟೆ ತಾಲ್ಲೂಕು :

ಈ ತಾಲ್ಲೂಕಿನಲ್ಲಿ ಸುಮಾರು ೪೬ ಜನ ರೇಷ್ಮೆ ಬೆಳೆಗಾರರಿದ್ದು ಅವರಿಗೆ ಬೇಕಾದ ತಾಂತ್ರಿಕ ಸಲಹೆಯನ್ನು ಹಾಗೂ ಇತರ ಸೌಲಭ್ಯಗಳನ್ನು ಒದಗಿಸುವುದು.

ಮಡಿಕೇರಿ ತಾಲ್ಲೂಕು :

ಕೊಡಗು ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ರೇಷ್ಮೆ ಉದ್ಯಮದ ಕೆಲಸಗಳನ್ನು ನೋಡಿಕೊಳ್ಳಲು ಮತ್ತು ಎಲ್ಲಾ ಸೌಲಭ್ಯಗಳ ವ್ಯವಸ್ಥೆ ಮಾಡಲು ಸಹಾಯಕ ನಿರ್ದೇಶಕರ ಕಛೇರಿಯು ನಿರ್ವಹಣೆ ಮಾಡುತ್ತದೆ.

೫) ೧೯೭೨-೭೩ ರಿಂದ ೧೯೮೬-೮೭ರವರೆಗೆ ಕೊಡುಗು ಜಿಲ್ಲೆಯಲ್ಲಾ ಯೋಜನೆಗಳಲ್ಲಿ ಸುಮಾರು೫೫ ಲಕ್ಷ ರೂಪಾಯಿಗಳು ಖರ್ಚಾಗಿರುವುದು ಕಂಡುಬಂದಿದೆ

೬) ಗಿರಿಜನರಿಗೆ ಒದಗಿಸಿರುವ ಸೌಲಭ್ಯಗಳು :

೧ ಹೊಸದಾಗಿ ಹಿಪ್ಪನೇರಳೆ ಬೆಳೆಸಲು ಹಿಪ್ಪನೇರಳೆ ಬಿತ್ತನೆ ಕಡ್ಡಿ ಮತ್ತು ಗೊಬ್ಬರ ಮುಫತ್ತಾಗಿ ಒದಗಿಸಲಾಗಿದೆ.

೨ ರೇಷ್ಮೆ ವ್ಯವಸಾಯ ಮತ್ತು ಹುಳುಸಾಕಾಣಿಕೆಯಲ್ಲಿ ಶಿಷ್ಯ ವೇತನ ಕೊಟ್ಟು ತರಬೇತಿ ನೀಡಲಾಗಿದೆ.

೩ ಸಾಂಪ್ರದಾಯಿಕ ರೇಷ್ಮೆ ವ್ಯವಸಾಯದ ಪ್ರದೇಶಗಳಿಗೆ ರೇಷ್ಮೆ ಬೆಳೆಗಾರರನ್ನು ಪ್ರವಾಸ ಕರೆದುಕೊಂಡು ಹೋಗಲಾಗಿದೆ.

೪ ರೇಷ್ಮೆ ಹುಳು ಸಾಕುವ ಉಪಕರಣಗಳನ್ನು ಮುಫತ್ತಾಗಿ ಒದಗಿಸಲಾಗಿದೆ.

೫ ಗಿರಿಜನ ಕಾಲೋನಿಗಳಲ್ಲಿ ಸಾಮೂಹಿಕ ಹಿಪ್ಪನೇರಳೆ ತೋಟ ಬೆಳೆಸಿ ಹುಳು ಸಾಕಾಣಿಕೆಗೆ ಅವಕಾಶ ಮಾಡಿ ಕೊಡಲಾಗಿದೆ.

೬ ಗಿರಿಜನ ಕಾಲೋನಿಗಳಲ್ಲಿ ಚಾಕಿ ಸಾಕಾಣಿಕೆ ಕೇಂದ್ರದ ಕಟ್ಟಡ ಹಾಗೂ ನೀರಾವರಿ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗಿವೆ.

೭ ರೇಷ್ಮೆ ಬೆಳೆಗಾರರಿಗೆ ಬೇಕಾದ ತಾಂತ್ರಿಕ ಸಲಹೆಯನ್ನು ಒದಗಿಸಲಾಗಿದೆ ಇದಕ್ಕಾಗಿ ೧೯೮೧-೮೨ ರಿಂದ ೧೯೮೬-೮೭ರವರೆಗೆ ೧೬.೫೫ ಲಕ್ಷ ರೂಪಾಯಿಗಳು ಖರ್ಚಾಗಿದೆ.

ತರೀಕೆರೆ ಅರಣ್ಯ ಸಂಪತ್ತು ಕಳ್ಳ ಸಾಗಾಣಿಕೆಯ ಬಗ್ಗೆ

೬೧೬. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧೯೮೪-೮೫ ಮತ್ತು ೧೯೮೫-೮೬ನೇ ಸಾಲುಗಳಲ್ಲಿ ತರೀಕೆರೆ ತಾಲ್ಲೂಕಿನಲ್ಲಿ ಅರಣ್ಯ ಸಂಪತ್ತಿನ ಕಳ್ಳಸಾಗಾಣಿಕೆಯ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ಅದರಿಂದ ಬಂದ ಆದಾಯ ವೆಷ್ಟು ?